ಶ್ರೀ ತನ್ವೀರ್ ಸೇಠ್: ಪ್ರಥಮ ದರ್ಜೆಯ ಅಧಿಕಾರಿಗಳ ವಿವರಗಳನ್ನು ಕೊಟ್ಟಿದ್ದಾರೆ. ನಾನು ಈ ಪ್ರಶ್ನೆ ಕೇಳಿದ ಉದ್ದೇಶವೇನೆಂದರೆ, ಸ್ಥಳೀಯ ಸಂಸ್ಥೆಗಳಲ್ಲಿ C&R Rules ಅನ್ನು ಮಾಡದಿರುವುದರಿಂದ ವಿವಿಧ ಇಲಾಖೆಗಳಿಂದ ವೈದ್ಯಕೀಯ ಅಧಿಕಾರಿಗಳು, ಇಂಜಿನಿಯರ್ಸ್ ಅಲ್ಲಿಗೆ ಹೋಗಿ ಅವರನ್ನು ಸ್ಥಳೀಯ ಸಂಸ್ಥೆಗಳಲ್ಲಿ ವಿಲೀನಗೊಳಿಸುವ ಪ್ರಯತ್ನ ಒಂದೊಂದು ಸಲ ಅಧಿಕಾರಿಗಳ ವಿವೇಚನೆಗೆ ಇರುತ್ತದೆ ಅಥವಾ ಸಚಿವರ ವಿವೇಚನೆಗೆ ಇರುತ್ತದೆ. ಯಾವ್ಯಾವ ಅಧಿಕಾರಿ ಯಾವ್ಯಾವ ಸಂಸ್ಥೆಗೆ ಹೋಗಿ ಸೇರಿಕೊಳ್ಳಬೇಕು ಎನ್ನುವ ಅವಕಾಶವಾಗುತ್ತದೆ. ಎರಡನೆಯದಾಗಿ, ಈ ರೀತಿಯ ಬೆಳವಣಿಗೆಗೆ ನಾವು ಹೆಚ್ಚಿನ ಆದ್ಯತೆ ಕೊಟ್ಟಾಗ ಅಲ್ಲಿ ಸಾಮಾಜಿಕ ನ್ಯಾಯ, roster system ಎಂದು ಏನು ಹೇಳುತ್ತೇವೆ, ಆ ವ್ಯವಸ್ಥೆ ಹಾಳಾಗುವ ಅವಕಾಶ ಹೆಚ್ಚಿಗೆ ಆಗುವ ಸಂದರ್ಭ ಇರುವುದರಿಂದ ಆ vacancies ಅನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ನೇರ ನೇಮಕಾತಿ ಮಾಡಿಕೊಳ್ಳುವ ಅವಕಾಶ ಎಲ್ಲೆಲ್ಲಿದೆ, ಮುಂದಿನ ದಿನಗಳಲ್ಲಿ ಆ ಬಗ್ಗೆ ಪಾಲಿಸಿ ಆಗಬೇಕಾಗಿರುವುದರಿಂದ ಸ್ಥಳೀಯ ಸಂಸ್ಥೆಗಳಿಗೆ C&R Rules ಮಾಡುವುದಕ್ಕೆ ಮಂತ್ರಿಯವರು ಮುಂದಾಗಬೇಕು.

ಶ್ರೀ ಎಸ್. ಸುರೇಶ್ ಕುಮಾರ್: ಈಗಾಗಲೇ ಮಹಾನಗರ ಪಾಲಿಕೆಗಳ ಮಟ್ಟದಲ್ಲಿ ಬಹಳ ವರ್ಷಗಳಿಂದ ಆಗಬೇಕೆಂದು ನಾವೇನು ಎದುರು ನೋಡುತ್ತಿದ್ದೆವು, ಮಹಾನಗರ ಪಾಲಿಕೆಗಳ ಮಟ್ಟದಲ್ಲಿ common C&R Rules ಅನ್ನು ನಾವು ರಚಿಸಿದ್ದೇವೆ. ತನ್ವೀರ್ ಸೇಠ್‌ರವರು CMC, TMC ಯಲ್ಲೂ C&R Rules ಆಗಬೇಕೆಂದು ಹೇಳುತ್ತಿದ್ದಾರೆ. ಅದನ್ನು ಮುಂದಿನ ಹಂತದಲ್ಲಿ ನಾವು ಖಂಡಿತ ತೆಗೆದುಕೊಳ್ಳುತ್ತೇವೆ. ಅದು ನಮ್ಮ ಪ್ರಸ್ತಾವನೆಯಲ್ಲಿದೆ. ಎರಡನೆಯದಾಗಿ, ಸುಮಾರು 29 ಜನರು ಮುಖ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಆ ಜಾಗಕ್ಕೆ 29 ಜನರನ್ನು 6 ತಿಂಗಳ ಹಿಂದೆಯೇ recruit ಮಾಡಿಕೊಂಡಿದ್ದು, ಅವರೆಲ್ಲರೂ ತರಬೇತಿ ಪಡೆಯುತ್ತಿದ್ದಾರೆ. ಇನ್ನು 2 ತಿಂಗಳು ಆದ ತಕ್ಷಣ ಸೂಕ್ತ ಜಾಗಗಳಿಗೆ ಅವರನ್ನು post ಮಾಡುತ್ತೇವೆ. ಇನ್ನು, ತಾವು ಮೇಲ್ದರ್ಜೆಗೆ ಏರಿಸುವ ವಿಚಾರ ಕೇಳಿದ್ದೀರಿ. Census ವರದಿ ಮುಗಿದ ಮೇಲೆ ಆ ಹಂತ ಬಂದ ಮೇಲೆ ಮೇಲ್ದರ್ಜೆಗೆ ಏರಿಸುವ ಪ್ರಸ್ತಾಪವನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ.

ನೆರೆ ಹಾವಳಿ ಸಂತ್ರಸ್ಥರಿಗೆ ರಚಿಸಲಾದ ಮನೆಗಳು

41 (191) ಶ್ರೀ ವಸಂತಬಂಗೇರ ಕೆ (ಬೆಳ್ತಂಗಡಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆರೆ ಹಾವಳಿ ಸಂತ್ರಸ್ತರಿಗಾಗಿ ಎಷ್ಟು ಸಂಖ್ಯೆಯ ಮನೆಗಳನ್ನು ನಿರ್ಮಿಸಲು ಕರ್ನಾಟಕ ಗೃಹ ಮಂಡಳಿಗೆ ಅನುಮತಿ ನೀಡಲಾಗಿದೆ;

ಆ) ನೆರೆ ಹಾವಳಿ ಸಂತ್ರಸ್ತರಿಗಾಗಿ ಮನೆಗಳನ್ನು ನಿರ್ಮಿಸಲು ಈವರೆಗೆ ಕರ್ನಾಟಕ ಗೃಹ ಮಂಡಳಿಗೆ ಎಷ್ಟು ಅನುದಾನವನ್ನು ಯಾವ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಗೊಳಿಸಲಾಗಿದೆ;

ಇ) ಕರ್ನಾಟಕ ಗೃಹ ಮಂಡಳಿಯು ಈವರೆಗೆ ಎಷ್ಟು ಮನೆಗಳ ಕಾಮಗಾರಿಗಳನ್ನು ಪೂರ್ತಿಗೊಳಿಸಿದೆ;

ಈ) ಕರ್ನಾಟಕ ಗೃಹ ಮಂಡಳಿಯು ನಿರ್ಮಿಸಿರುವ ಎಷ್ಟು ಮನೆಗಳನ್ನು ನೆರೆ ಸಂತ್ರಸ್ತ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ನೆರೆ ಹಾವಳಿ ಸಂತ್ರಸ್ತರಿಗಾಗಿ ಕರ್ನಾಟಕ ಗೃಹ ಮಂಡಳಿಗೆ ಬಿಜಾಪುರ ಜಿಲ್ಲೆಯಲ್ಲಿ 1299 ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ 3483, ಒಟ್ಟು 4782 ಮನೆಗಳನ್ನು ನಿರ್ಮಿಸಲು ಇಲ್ಲಿಯವರೆಗೆ ಅನುಮತಿ ನೀಡಿದೆ.

ಆ) ನೆರೆ ಹಾವಳಿ ಸಂತ್ರಸ್ತರಿಗಾಗಿ ಮನೆಗಳನ್ನು ಕರ್ನಾಟಕ ಗೃಹ ಮಂಡಳಿಗೆ ಲೆಕ್ಕ ಶೀರ್ಷಿಕೆ 8235-00-111-0-02 "Public Contributions to Calamity Relief" ಅಡಿಯಲ್ಲಿ ಸರ್ಕಾರದಿಂದ ಈವರೆಗೆ ಒಟ್ಟು ರೂ. 50.00 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಇ) ಬಿಜಾಪುರ ಜಿಲ್ಲೆಯಲ್ಲಿ 1299 ಮನೆಗಳ ಪೈಕಿ, 864 ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ 3483 ಮನೆಗಳ ಪೈಕಿ 1403 ಒಟ್ಟು 2267 ಆಸರೆ ಮನೆಗಳ ನಿರ್ಮಾಣವನ್ನು ಕರ್ನಾಟಕ ಗೃಹ ಮಂಡಳಿಯು ಪೂರ್ಣಗೊಳಿಸಿದೆ.

ಈ) ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ನೀರಲಗಿಯಲ್ಲಿ 202, ಸುಲ್ತಾದಲ್ಲಿ 349, ಗೋನಾಳದಲ್ಲಿ 70, ಹಿರೇನಸಬಿಯಲ್ಲಿ 81 ಒಟ್ಟು-702 ಹಾಗೂ ಬಿಜಾಪುರ ಜಿಲ್ಲೆಯ ತೋನಸಾಳ ಗ್ರಾಮದಲ್ಲಿ 80 ಆಸರೆ ಮನೆಗಳನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ದಿನಾಂಕ: 19/02/2011ರಂದು ಹಸ್ತಾಂತರಿಸಲಾಗಿದೆ. ಜಿಲ್ಲಾಧಿಕಾರಿಗಳು ನೆರೆ ಹಾವಳಿ ಸಂತ್ರಸ್ತ ಫಲಾನುಭವಿಗಳಿಗೆ ಈ ಮನೆಗಳನ್ನು ಹಸ್ತಾಂತರಿಸುತ್ತಾರೆ.

ಶ್ರೀ ಕೆ. ವಸಂತ ಬಂಗೇರ: ನೆರೆ ಸಂತ್ರಸ್ಥರಿಗೆ ಮನೆ ಹಂಚಲು ದೀರ್ಘ ಸಮಯ ಏಕೆ ಆಯಿತು? ಎಷ್ಟು ನೆರೆ ಸಂತ್ರಸ್ಥರಿಗೆ ಮನೆ ಹಂಚಲು ಬಾಕಿ ಇದೆ?

ಶ್ರೀ ವಿ. ಸೋಮಣ್ಣ: ರಾಜ್ಯದಲ್ಲಿ ನಾವು ನೆರೆ ಹಾವಳಿ ಸಂತ್ರಸ್ಥರಿಗೆ ಒಟ್ಟು 59,470 ಮನೆಗಳನ್ನು ಕಟ್ಟುವ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ.

ಇದರಲ್ಲಿ ಕರ್ನಾಟಕ ಗೃಹ ಮಂಡಳಿಯವರು 4,782 ಮನೆಗಳನ್ನು ಬಾಗಲಕೋಟೆ ಮತ್ತು ಬಿಜಾಪುರಗಳಲ್ಲಿ ಕಟ್ಟುತ್ತಿದ್ದಾರೆ. ಈಗಾಗಲೇ 2,267 ಮನೆಗಳು ಪೂರ್ಣಗೊಂಡಿದ್ದು, 8235 ಶೀರ್ಷಿಕೆ ಅಡಿಯಲ್ಲಿ public contribution to Calamity Relief Fund ಅಡಿಯಲ್ಲಿ 50 ಕೋಟಿ ರೂಪಾಯಿಗಳನ್ನು ಪಡೆದುಕೊಂಡು Housing Boardಗೆ ಕೊಟ್ಟು ಅದರಲ್ಲಿ 4,782 ಮನೆಗಳಲ್ಲಿ ಈಗಾಗಲೇ ಒಟ್ಟು 782 ಮನೆಗಳನ್ನು ಹಸ್ತಾಂತರ ಮಾಡಿದ್ದೇವೆ. ಮಾರ್ಚ್ 30ನೇ ತಾರೀಖಿನೊಳಗಡೆ ಕರ್ನಾಟಕ ಗೃಹ ಮಂಡಳಿಯ ಎಲ್ಲಾ ಮನೆಗಳನ್ನೂ ಕೂಡ ಫಲಾನುಭವಿಗಳಿಗೆ ಹಸ್ತಾಂತರ ಮಾಡುವ ಜೊತೆಯಲ್ಲಿ ಕರ್ನಾಟಕ ಗೃಹ ಮಂಡಳಿ 5 ಕಡೆ 5 ಅಂಗನವಾಡಿ ಕೇಂದ್ರವನ್ನು 5 ಕಡೆ 5 bus shelter ಅನ್ನು ನಿರ್ಮಿಸುವ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಮಾರ್ಚ್ 30ನೇ ತಾರೀಖಿನೊಳಗಡೆ ಎಲ್ಲಾ ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ: ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ. ಮಾನ್ಯ ಸಚಿವರು ಆಶ್ರಯ ಮನೆ ವಿಷಯ ಪ್ರಸ್ತಾಪ ಮಾಡಿದ್ದಾರೆ. Housing Board ಗೆ ಸೀಮಿತವಾಗಿ ಮಾರ್ಚ್ ಒಳಗಾಗಿ ಎಲ್ಲಾ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದ್ದಾರೆ. ಒಟ್ಟಾರೆ ಗುರಿ ಇರುವುದು 59 ಸಾವಿರ ಮನೆಗಳು. ಆ 59 ಸಾವಿರ ಮನೆಗಳನ್ನು ಯಾವಾಗ ಕಟ್ಟಿ ಮುಗಿಸುತ್ತೀರಿ ಎನ್ನುವ ಬಗ್ಗೆ ಖಚಿತವಾದ ಉತ್ತರ ನಿಮ್ಮಿಂದ ಬಂದರೆ ಒಳ್ಳೆಯದಾಗುತ್ತದೆ.

ಶ್ರೀ ವಿ. ಸೋಮಣ್ಣ: ಅವರು ಕೇಳಿರುವ ಪ್ರಶ್ನೆಗೆ ನಾನು answer ಮಾಡಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ: ನಾನು ಈಗ ಕೇಳಿರುವುದು ಮಾನ್ಯ ಮುಖ್ಯಮಂತ್ರಿಯವರಲ್ಲಿ, ಏಕೆಂದರೆ, that is top priority subject.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) : ಈ ಶತಮಾನದಲ್ಲಿ ಕಂಡರಿಯದ ನೆರೆ ಬಂದಿತ್ತು. ಅದರ ಪರಿಣಾಮ ಸುಮಾರು 400 ಗ್ರಾಮಗಳು ಜಲಾವೃತವಾದವು. ಇದು ಕೇವಲ ನಾನು ಅಧಿಕಾರಕ್ಕೆ ಬಂದ ಮೇಲೆ ಅಲ್ಲ. ಕಳೆದ 25–30 ವರ್ಷಗಳಿಂದ ತಗ್ಗು ಪ್ರದೇಶಗಳಲ್ಲಿ ಆ ಗ್ರಾಮಗಳು ನೆರೆಯಿಂದ ಮುಳುಗಿ ಹೋದವು. ಮೊದಲ ಬಾರಿಗೆ ಎತ್ತರದ ಸ್ಥಳಕ್ಕೆ ಸ್ಥಳಾಂತರ ಮಾಡಬೇಕೆನ್ನುವ ನಿರ್ಧಾರ ತೆಗೆದುಕೊಂಡು ಸುಮಾರು ಐದೂವರೆ ಸಾವಿರ ಎಕರೆ ಭೂಮಿಯನ್ನು ರೈತರಿಂದ ಕೊಂಡುಕೊಂಡು ಹೊಸ ನವನಗರ

ನಿರ್ಮಾಣ ಮಾಡುವಂಥ ಕೆಲಸಕ್ಕೆ ಕೈ ಹಾಕಿದೆವು. ಅದರ ಒಟ್ಟು ವೆಚ್ಚ ಸುಮಾರು ಸಾವಿರದ ನೂರು ಕೋಟಿ ರೂಪಾಯಿಗಳಾಗುತ್ತದೆ. ಸುಮಾರು ಐದುನೂರು ಕೋಟಿಗಿಂತಲೂ ಹೆಚ್ಚಿನ ಹಣವನ್ನು ಸಾರ್ವಜನಿರಿಂದ, ಸಂಘ ಸಂಸ್ಥೆಗಳಿಂದ, ಮಠಾಧಿಪತಿಗಳಿಂದ ಸಂಗ್ರಹಿಸಿ, ಮಾರ್ಚಿ ಕೊನೆಯೊಳಗೆ 70% ಮನೆಗಳನ್ನು ಸ್ಥಳಾಂತರ ಮಾಡುತ್ತೇವೆ. ನಾನು ಮೊನ್ನೆ ತಾನೆ ಹಾವೇರಿ ಮತ್ತು ಇತರೆ ಬೇರೆ ಬೇರೆ ಜಿಲ್ಲೆಗಳಲ್ಲಿ ಮನೆಗಳನ್ನು ಹಸ್ತಾಂತರಿಸಿ ಬಂದಿದ್ದೇನೆ. ಇದಾದ ಮೇಲೆ ನಾನು ಎಲ್ಲರನ್ನು ಕರೆದುಕೊಂಡು ಹೋಗುತ್ತೇನೆ. ಅಲ್ಲಿ ಯಾವ ರೀತಿಯಾಗಿ 30 X 50 ಸೈಟ್ ಕೊಟ್ಟು ಶೌಚಾಲಯ, ವಿದ್ಯುತ್ ದೀಪ, ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ, ಈ ರೀತಿ ಬಹಳ ಒಳ್ಳೆಯ ರೀತಿಯಲ್ಲಿ ಮಾಡಿದ್ದು, ಮುಂದಿನ ದಿನಗಳಲ್ಲಿ ಅವರಿಗೆ ದೇವರು ಆರ್ಥಿಕ ಶಕ್ತಿಯನ್ನು ಕೊಟ್ಟಾಗ ಇನ್ನೊಂದೆರಡು ರೂಂಗಳನ್ನು ಕಟ್ಟಿಕೊಂಡು ದೊಡ್ಡ ರೈತ ಕುಟುಂಬವೂ ವಾಸಿಸಬಹುದು. ನೀವು ಹೇಳಿದ ಹಾಗೆ ಅದು ಎರೆ ಭೂಮಿಯಾದ್ದರಿಂದ ಫೌಂಡೇಷನ್ ಮತ್ತಿತ್ತರ ಕೆಲಸಕ್ಕೆ ಅಡ್ಡಿಯಾಯಿತು. ಪಕ್ಕದ ರಾಜ್ಯದಲ್ಲಿ ಏನಾಗಿದೆ ಎಂಬುದು ತಮಗೆ ಗೊತ್ತಿದೆ. ನೆರೆ ಸಂದರ್ಭದಲ್ಲಿ ಮಾನ್ಯ ಸೋನಿಯಾಗಾಂಧಿಯವರು, ಮಾನ್ಯ ಚಿದಂಬರಂರವರು, ಇತರರು ಅಲ್ಲಿ ಸ್ಪಾಟ್ ನೋಡುವುದಕ್ಕೆ ಬಂದಾಗ ಸ್ವತಃ ಚಿದಂಬರಂ ರವರು "ಯಡಿಯೂರಪ್ಪನವರೆ, ಇದು ಒಂದು ವರ್ಷದಲ್ಲಿ ಆಗದೇ ಇರುವ ಕೆಲಸ ನಾವು ಎಲ್ಲಾ ಪ್ರಯತ್ನ ಮಾಡಿದ್ದೇವೆ" ಎಂದು ಹೇಳಿದರು. ಏನೋ ಒಂದು ದುಸ್ಸಾಹಸಕ್ಕೆ ಕೈ ಹಾಕಿ ಬೇಗ ಮುಗಿಸಬೇಕೆಂದು ನಾನು ಹೊರಟಿದ್ದೇನೆ. ನಿಶ್ಚಿತವಾಗಿ ಮೇ ಕೊನೆಯೊಳಗಾಗಿ ಒಂದು ಮನೆ ಕಟ್ಟುವುದು ಸಹ ನಿಲ್ಲುವುದಿಲ್ಲ. ಮಾರ್ಚಿಯೊಳಗೆ 70% ವರ್ಕ್ ಮುಗಿಯುತ್ತದೆ. ಮೇ ಕೊನೆಗೆ 59,000 ಮನೆಗಳನ್ನು ಆ ಜನರಿಗೆ ಕೊಟ್ಟು ನೆಮ್ಮದಿಯಿಂದ ಬದುಕುವಂಥ ಕೆಲಸ ಮಾಡುತ್ತೇವೆ. ಇದರಲ್ಲಿ ಯಾವುದೇ ಅನುಮಾನ ಮಾನ್ಯ ಸದಸ್ಯರಿಗೆ ಬೇಡ. ಬಹಳ ಒಳ್ಳೆಯ ರೀತಿ ಆ ಕೆಲಸಗಳಾಗುತ್ತಿವೆ.

ಶ್ರೀ ವಸಂತಬಂಗೇರ ಕೆ.: ಮಾನ್ಯ ಸಚಿವರು ನನಗೆ ಸರಿಯಾದ ರೀತಿಯ ಉತ್ತರ ಕೊಟ್ಟಿಲ್ಲ. ಮನೆ ಹಂಚುವುದರಲ್ಲಿ ಇಷ್ಟು ವಿಳಂಬವಾಗುವುದಕ್ಕೆ ಏನು ಕಾರಣ? ನೆರೆ ಹಾವಳಿ ಸಂತ್ರಸ್ಥರಿಗಾಗಿ ಮನೆ ಹಂಚುವುದರಲ್ಲಿ ಎಷ್ಟು ಬಾಕಿ ಇದ? ಎಷ್ಟು ಸಮಯದೊಳಗೆ ಎಲ್ಲಾ ನೆರೆ ಸಂತ್ರಸ್ಥರಿಗೆ ಮನೆ ಹಂಚುತ್ತೀರಾ? ದಯವಿಟ್ಟು ಮಾನ್ಯ ಸಚಿವರು ನಿರ್ದಿಷ್ಟವಾಗಿ ತಿಳಿಸಿ.

ಶ್ರೀ ವಿ. ಸೋಮಣ್ಣ: ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ನಾಯಕರು ಹೇಳಿದ್ದಾರೆ. ನಮ್ಮ ಹಿರಿಯರಾದ ವಸಂತ ಬಂಗೇರರವರ ಪ್ರಶ್ನೆ ಕೇವಲ ಗೃಹ ಮಂಡಳಿಗೆ ಮಾತ್ರ ಸೀಮಿತವಾಗಿತ್ತು. 4,782 ಮನೆಗಳನ್ನು ಕೂಡ ಮಾರ್ಚ್ 30, 2011ರೊಳಗೆ ಆ ಫಲಾನುಭವಿಗಳಿಗೆ ಹಂಚತಕ್ಕಂಥ ಕೆಲಸ ಮಾಡುತ್ತೇವೆ. ಬಾಕಿ ಎಲ್ಲಾ ಉತ್ತರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಈಗ ತಾನೆ ಸವಿಸ್ತಾರವಾಗಿ ತಿಳಿಸಿದ್ದಾರೆ.

ಪ್ರವಾಸಿ ತಾಣಗಳ ಅಭಿವೃದ್ಧಿ

42 (374) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಸರ್ಕಾರ ರಾಯಚೂರು ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ನೀಡಿರುವ ಅನುದಾನದ ಮೊತ್ತವೆಷ್ಟು ; (ವರ್ಷವಾರು ವಿವರಗಳನ್ನು ನೀಡುವುದು)

ಆ) ಕಳೆದ 3 ವರ್ಷಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಈವರೆವಿಗೂ ಎಷ್ಟು ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲಾಗಿದೆ; (ವಿವರಗಳನ್ನು ನೀಡುವುದು)

ಇ) ಈವರೆವಿಗೂ ಅಭಿವೃದ್ಧಿಪಡಿಸಿರುವ ಪ್ರವಾಸಿ ತಾಣಗಳಿಗೆ ಕಳೆದ 3 ವರ್ಷಗಳಲ್ಲಿ ವೆಚ್ಚ ಮಾಡಿರುವ ಮೊತ್ತವೆಷ್ಟು ; (ವರ್ಷ ಮತ್ತು ಪ್ರವಾಸಿ ತಾಣಗಳವಾರು ವಿವರಗಳನ್ನು ನೀಡುವುದು)

ಈ) ಕಳೆದ 3 ವರ್ಷಗಳಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಪ್ರವಾಸಿ ತಾಣಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು ; (ವರ್ಷವಾರು ವಿವರಗಳನ್ನು ನೀಡುವುದು)

ಉ) ಸಿಂಧನೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ ; (ವಿವರಗಳನ್ನು ನೀಡುವುದು)

ಊ) ಸಿಂಧನೂರು ನಗರದ ಅಂಬಾಮಠ ಪ್ರವಾಸಿ ತಾಣದಲ್ಲಿ ಯಾತ್ರಾನಿವಾಸ ನಿರ್ಮಾಣಕ್ಕೆ ಸರ್ಕಾರ ನಿಗದಿಪಡಿಸಿದ್ದ ಅನುದಾನದ ಮೊತ್ತವೆಷ್ಟು;

ಋ) ಈವರೆವಿಗೂ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು ಮತ್ತು ಅದರ ಕಾಮಗಾರಿಯು ಈಗ ಯಾವ ಹಂತದಲ್ಲಿದೆ ?